4.	ಶ್ರೀ ದೊಡ್ಡಮ್ಮದೇವಿ ದೇವಾಲಯ, ಮೊಳೆ ಗ್ರಾಮ, ನಾಗಮಂಗಲ ತಾ	30000
5.	ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಕಾರಬೈಲು, ನಾಗಮಂಗಲ ತಾ	30000
6.	ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಕಾರಬೈಲು ನಾಗಮಂಗಲ ತಾ	15000
7.	ಶ್ರೀ ಲಿಂಗೇಶ್ವರ ದೇವಾಲಯ, ತಾಳನಕೆರೆ ಹೋಬಳಿ, ನಾಗಮಂಗಲ ತಾ	15000
8.	ಶ್ರೀ ಈಶ್ವರ ದೇವಾಲಯ ಲಾಳನಕೆರೆ ನಾಗಮಂಗಲ ತಾ.	15000
	ಒಟ್ಟು	425000

ಶಿವಮೊಗ್ಗದಿಂದ ಸಕ್ರೇಬೈಲುವರಿಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ

190(299) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗದಿಂದ ಸಕ್ರೆಬೈಲು ವರೆಗೆ 12.5 ಕಿಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು??

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿ 13 (ಮುಂದುವರೆದ ಭಾಗ) ಚಿತ್ರದುರ್ಗ-ಮಂಗಳೂರು ರಸ್ತೆಯ ಭಾಗವಾದ ಶಿವಮೊಗ್ಗದಿಂದ ಸಕ್ರೆಬೈಲುವರೆಗೆ (ಕಿ.ಮೀ. 530.25 ರಿಂದ 544.00) 13.75 ಕಿ.ಮೀ. ಇರುತ್ತದೆ. ರಾಷ್ಟ್ರೀಯ ಹೆದ್ದಾರಿ 13ರ ಕಿ.ಮೀ. 530.25 ರಿಂದ 550.00 ರವರೆಗೆ ರಸ್ತೆಯನ್ನು ಬಲಪಡಿಸುವ ಕಾಮಗಾರಿಯು 2002-03ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯಲ್ಲಿ ಸೇರಿದ್ದು ರೂ. 480.00 ಲಕ್ಷಗಳ ಅಂದಾಜು ಪಟ್ಟಿಯನ್ನು ಕೇಂದ್ರ ರಸ್ತೆ ನಿಧಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯಕ್ಕೆ ಅನುಮೋದನೆಗೆ ಸಲ್ಲಿಸಲಾಗಿದೆ.

ಆ) ಅಂದಾಜು ಪಟ್ಟಿಯ ಅನುಮೋದನೆಯ ನಂತರ 2002-03ರಲ್ಲಿ ಅಂದರೆ ಇದೇ ವರ್ಷ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಬಗರ್ ಹುಕುಂ ಸಾಗುವಳಿ

191(300) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರ ಪ್ರದೇಶದ ಕೇಂದ್ರ ಭಾಗವನ್ನು ಗಣನೆಗೆ ತೆಗೆದುಕೊಂಡು 5 ಕಿ.ಮೀ. ಭೂ ಪರಿಮಿತಿಯೊಳಗೆ ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನುಗಳ ಸಕ್ರಮಗೊಳಿಸುವ ಬಗ್ಗೆ ಹಾಲಿ ಇರುವ ಕಾಯ್ದೆಗೆ ತಿದ್ದುಪಡಿ ತರುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ವಿವರ ನೀಡುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ.

ಶಿವಮೊಗ್ಗ ತಾಲ್ಲೂಕ ವ್ಯಾಪ್ತಿಯಲ್ಲಿ ಭೂ ಕಂದಾಯ ಕಲಂ 94 ಸಿ ರಡಿ ಮನೆಗಳ ಸಕ್ರಮಗೊಳಿಸುವುದು

192(301) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಕಂದಾಯ ಕಾಯ್ದೆ ಕಲಂ 94 'ಸಿ' ಅಡಿಯಲ್ಲಿ ಎಷ್ಟು ಮನೆಗಳನ್ನು ಸಕ್ರಮಗೊಳಿಸಿ ಹಕ್ಕು ಪತ್ರಗಳನ್ನು ನೀಡಲಾಗಿರುತ್ತದೆ?

ಆ) ಹಣ ಪಾವತಿಸಿದೆ ಮಂಜೂರಾತಿ ಆದೇಶವಾಗಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಈ ಕಾಯ್ದೆಯಡಿ ಪುನಃ ಸಕ್ರಮ ಕೋರಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಸಿ) ಅನ್ವಯ ಸಕ್ರಮಗೊಳಿಸಲಾದ ಪ್ರಕರಣಗಳು (ದಿನಾಂಕ 30-6-2002 ರಂತೆ)

	ಶಿವಮೊಗ್ಗ ನಗರ	ಶಿವಮೊಗ್ಗ ಗ್ರಾಮಾಂತರ
ಸಕ್ರಮಗೊಳಿಸಲಾದ ಪ್ರಕರಣಗಳು	1924	818
ಹಕ್ಕುಪತ್ರ ನೀಡಿರುವ ಪ್ರಕರಣಗಳು	495	434
ಆ) ಮಂಜೂರಾಗಿ ಹಣ ಪಾವತಿಯಾಗದೇ ಇರುವ ಹಕ್ಕುಪತ್ರ ನೀಡದೇ ಇರುವ ಪ್ರಕರಣಗಳು.	1429	384

ಇ) ಇಲ್ಲ.

ಶಿವಮೊಗ್ಗ ತಹಸೀಲ್ದಾರ್ ರವರ ಕಛೇರಿಗೆ ಕಟ್ಟಡ

193(302) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?